ಓ.ಎಸ್.71 /2023
ಪಿ.ಡಬ್ಲ್ಯೂ : 01

ದಿನಾಂಕ 18-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಎಂ ಕೆ ವಿಕೆ ವಕೀಲರಿಂದ**

ಆರ್.ಟಿ.ಸಿ ಆಗುವಾಗ ವಾದಿ ಮತ್ತು ಪ್ರತಿವಾದಿ 4 ರಿಂದ 7 ರವರಿಗೆ ನೋಟಿಸ್ ಆಗಲಿಲ್ಲ. ಎಂದರೆ ನನಗೆ ಗೊತ್ತಿಲ್ಲ . ಕಾರಣ ನನ್ನ ಗಂಡ ಇರುವಾಗಲೇ ಆಗಿತ್ತು. ನನ್ನ ಗಂಡನಿಂದ ನನ್ನ ಹೆಸರಿಗೆ ಖಾತೆ ಬದಲಾವಣೆ ಆಗುವಾಗ ಕಂದಾಯ ಅಧಿಕಾರಿಗಳಿಂದ ವಾದಿ ಮತ್ತು 4 ರಿಂದ 7 ರವರಿಗೆ ನೋಟಿಸ್ ಆಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸ್ವತ್ತು ಬದಲಾವಣೆ ಮಾಡುವಾಗ ಮತ್ತು ಸಂಟ್ಲ ಮೆಂಟ್ ಮಾಡುವಾಗ ಹಾಗೂ ಖಾತೆ ಮಾಡುವಾಗ ವಾದಿ, ಪ್ರತಿವಾದಿ 4 ರಿಂದ 7 ರವರು ಊರಿನಲ್ಲಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಊರಿಗೆ ಬಂದು ಹೋಗುತ್ತಾರೆ. ನಮ್ಮ ಪ್ರತಿವಾದ ಪತ್ರದಲ್ಲಿ ವಾದಿ, ಪ್ರತಿವಾದಿ 4 ರಿಂದ 7 ರವರು ಮನೆಗೆ ಬರುತ್ತಿರಲಿಲ್ಲ ಮತ್ತು ತಾಯಿಯನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ ಎಂದರೆ ಸರಿ.

ನನ್ನ ಅತ್ತೆ ಸಟಲ್ ಮೆಂಟ್ ಡೀಡ್ ಮಾಡಿಕೊಡುವಾಗ ನಾನು ನನ್ನ ಗಂಡ ಮತ್ತು ನನ್ನ ಮಕ್ಕಳು ಮಾತ್ರ ನನ್ನಅತ್ತೆಯ ಜೊತೆ ಇದ್ದೆವು ಎಂದರೆ ಸರಿ ಮತ್ತು ವಾದಿ ಪ್ರತಿವಾದಿ 4 ರಿಂದ 7 ರವರು ಆ ಸಮಯದಲ್ಲಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಅತ್ತೆ ಫೋನಿನಲ್ಲಿ ಮಕ್ಕಳನ್ನು ಕೇಳಿ ತಿಳಿಸಿ ನಂತರ ಸೆಟಲ್ ಮೆಂಟ್ ಡೀಡ್ ಮಾಡಿ ಕೊಟ್ಟಿರುತ್ತಾರೆ. ಈ ವಿಚಾರವನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ

ಹೇಳಿರುತ್ತೇನೆ. ಈಗ ಹೇಳಿದ ವಿಚಾರವನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಅತ್ತೆ ಎಲ್ಲ ವಿಚಾರಗಳನ್ನು ಅವರ ಮಕ್ಕಳುಗಳಿಗೆ ಹೇಳುತ್ತಿದ್ದರು. ಈ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ಹೇಳಿದ್ದೆನೋ ಅಥವಾ ಇಲ್ಲವೋ ಎಂದು ನನಗೆ ನೆನಪು ಇಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ನನ್ನ ಅತ್ತೆಯ ಮಕ್ಕಳು ಅಂದರೆ ನನ್ನ ಮೈದುನ ಮತ್ತು ನಾದಿನಿ, ನನ್ನ ಗಂಡ ಮತ್ತು ನನ್ನ ಅತ್ತೆಯ ಜೊತೆ ಸಂಪರ್ಕವನ್ನು ಕಡಿದು ಕೊಂಡಿದ್ದರು ಎಂದು ಹೇಳಿದ್ದೇನೆಂದರೆ ಸಾಕ್ಷಿ ಆ ರೀತಿ ಬರೆದಿರ ಬಹುದು ಎಂದು ತಿಳಿಸಿದ್ದಾರೆ. ಪ್ರಮಾಣ ಪತ್ರದ ಅಂಶಗಳನ್ನು ಮತ್ತು ಪ್ರತಿವಾದ ಪತ್ರದ ಒಕ್ಕಣೆಯ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಸಾಕ್ಷಿಗೆ ಒಂದು ಪಾಸ್ ಪೋರ್ಟ್ ನ್ನು ತೋರಿಸಿ ಅದು ವಾದಿಯ ಗಂಡ ಸತಾನಿ ಕಾಸ್ಟಲಿನೋ ರವರಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿ ಕೊಂಡಿದ್ದರಿಂದ ಸದ್ರಿ ಪಾಸ್ ಪೋರ್ಟ್ ನ್ನು ನಿಪಿ-8 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಐರಿನ್ ಕಾಸ್ಟಲಿನೋ ರವರ ಪಾಸ್ ಪೋರ್ಟ್ ನ್ನು ತೋರಿಸಿ ಅದು ವಾದಿರವರ ಪಾಸ್ ಪೋರ್ಟ್ ಅಲ್ಲವೇ ಎಂಬ ಕೇಳಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಅದನ್ನು 9 ಮತ್ತು 10 ಎಂದು ಗುರುತಿಸಲಾಯಿತು.

ವಾಜ್ಯ ಮಾಡುವ ಪೂರ್ವದಲ್ಲಿ ನನ್ನ ಅತ್ತೆಯವರ ಚಿನ್ನದಲ್ಲಿ 1 ಪಾಲು ಭಾಗವನ್ನು ವಾದಿಯರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ವಾದಿ ಎಂದು ಕೂಡ ನನ್ನ ಅತ್ತೆಯಲ್ಲಿ ಚಿನ್ನ ಕೇಳಲಿಲ್ಲ. ಸಾಕ್ಷಿ ಮುಂದುವರೆದು ನನ್ನ ಬಳಿ ಅತ್ತೆಯ ಚಿನ್ನ ಇಲ್ಲ ಎಂದು

ತಿಳಿಸಿರುತ್ತಾರೆ. ನನ್ನ ಅತ್ತೆಗೆ ಅವರ ಸಂಬಂಧಿಕರ ಜೊತೆ ಮತ್ತು ಅವರ ಉಳಿದ ಮಕ್ಕಳ ಜೊತೆ ಸಂಪರ್ಕ ಇಲ್ಲದೆ ಇರುವ ಸಮಯದಲ್ಲಿ ಅದನ್ನು ಉಪಯೋಗಿಸಿಕೊಂಡು ನಾನು ಮತ್ತು ನನ್ನ ಗಂಡ ಸಟಲ್ ಮೆಂಟ್ ಡೀಡನ್ನು ಸೃಷ್ಟಿ ಮಾಡಿ ಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಅತ್ತೆ ಪವರ ಅಫ್ ಆರ್ಟನಿಯನ್ನು ಬರೆದು ಕೊಡಲಿಲ್ಲ ಮತ್ತು ನಾವೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಅತ್ತೆಯ ಉಳಿದ ವಾರಿಸುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಪವರ ಆಫ್ ಅಟರ್ನಿಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ಸಟಲ್ ಮೆುಂಟ್ ಮತ್ತು ಪವರ ಆಫ್ ಆಟರ್ನಿಯನ್ನು ಮಾಡಿಕೊಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಮದುವೆಯಾದ ನಂತರ ನಾನು ಮತ್ತು ನನ್ನ ಗಂಡ ಮತ್ತು ಮಕ್ಕಳು ನನ್ನ ಅತ್ತೆಯ ಜೊತೆ 8 ವರ್ಷಗಳ ಜೊತೆ ಇದ್ದೇವು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ,
ಉಡುಪಿ.